**<u>ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ</u>**

**<u>ಕೆ.ಆರ್.ನಗರ</u>**

**<u>ಓಎಸ್  ನಂ.461/2012</u>**

ಡಿ.ಡಬ್ಲ್ಯೂ -8

**<u>ದಿನಾಂಕಃ24/06/2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲು:  ವಾದಿ ಪರ ವಕೀಲರುಃ</u>**

12 ವರ್ಷಗಳ ನಂತರ ಸಲ್ಲಿಸಿರುವ ದಾವಾ ಸಂಖ್ಯೆಯ ಮತ್ತು ಅದನ್ನು ಯಾವ ವರ್ಷದಲ್ಲಿ ಸಲ್ಲಿಸಲಾಗಿದೆ ಗೊತ್ತಿಲ್ಲ. ನನಗೆ ಪ್ರತಿವಾದಿಗಳು ಬಂದು ವಾದಿಗಳು ದಾವೆ ಸಲ್ಲಿಸಿದ್ದಾರೆ ಎಂದು ತಿಳಿಸಿದ್ದು ನಂತರ ನಾನು ನಾನಾಗಿಯೇ ಬಂದು ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿದ್ದೇನೆ. ಸರ್ವೆ ನಂಃ 25/6 ರಲ್ಲಿ 30 ಗುಂಟೆ ಜಮೀನು ನಮಗೆ ಸೇರಿದ್ದು ಅದನ್ನು ನಾವು ರಾಜೇಗೌಡರ ಕಡೆಯಿಂದ ಖರೀದಿ ಮಾಡಿರುತ್ತೇವೆ. ಸಾಕ್ಷಿ ಮುಂದುವರೆದು ನಮ್ಮ ಅಣ್ಣ ಮತ್ತು ನಾವು ನೀಡಿರುತ್ತೇವೆ. ನಾನು ಹೇಳಿದಂತೆ ನನ್ನ ಹೇಳಿಕೆಗೆ ಪೂರಕವಾಗಿ ಯಾವುದೇ ದಾಖಲೆಗಳನ್ನು ನೀಡಿಲ್ಲ ಎಂದರೆ ಸರಿಯಲ್ಲ. ನನಗೆ ದಾವಾ ಸ್ವತ್ತಿನ ಬಗ್ಗೆ ಯಾವುದೇ ನಿಖರವಾದ ಮಾಹಿತಿ ಇರದೇ ಇದ್ದರೂ ಸಹ 6 ನೇ ಪ್ರತಿವಾದಿ ಗೋವಿಂದೇಗೌಡರ ಮಾತನ್ನು ಕೇಳಿ ನ್ಯಾಯಾಲಯದಲ್ಲಿ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ 2 ನೇ ಸ್ವತ್ತಿನ ಪಶ್ಚಿಮ ದಿಕ್ಕಿನಲ್ಲಿ ನಮ್ಮ ಜಮೀನು ಇದೆ ಎಂದು ನಾವು ಬರೆಸಿಲ್ಲ ಆನಂದ್ ರವರ ಜಮೀನು ಇದೆ.

**<u>ಮರುವಿಚಾರಣೆ ಪ್ರತಿವಾದಿ ಪರ ವಕೀಲರಿಂದಃ</u>**

ಸರ್ವೆ ನಂಃ 25/1 ರಲ್ಲಿ ಗೋವಿಂದೇಗೌಡರು ಮತ್ತು ಮಂಜೇಗೌಡರು ಸ್ವಾಧೀನದಲ್ಲಿದ್ದಾರೆ. ಸರ್ವೆ ನಂಃ 25/6 ರಲ್ಲಿ ಯೋಗೇಶ್ ಮತ್ತು ನೇತ್ರಪಾಲು ರವರು ಇದ್ದೇವೆ.

ಈ ಹಂತದಲ್ಲಿ  ಪ್ರತಿವಾದಿ ಪರ ವಕೀಲರು ಸಂಪೂರ್ಣವಾಗಿ ಪಾಟಿ ಸವಾಲನ್ನು ಮುಗಿಸಿರುತ್ತಾರೆ.

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ ಎಂ

**(ಚಂದನ್.ಎಸ್)**
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ